**<u>ದಿಃ20.02.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಎಂ ಬಿ ಎ ವಕೀಲರಿಂದ ಃ</u>**

ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು, ಅದರಲ್ಲಿ ಪ್ರಸ್ತಾಪಿಸಿರುವ ವಿಚಾರಗಳನ್ನು ನಾನೇ ಮಾಹಿತಿ ಕೊಟ್ಟು ಬರೆಸಿರುತ್ತೇನೆ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಒಕ್ಕಣೆಯನ್ನು ಓದಿಸಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸತ್ಯದಿಂದ ಕೂಡಿದೆ ಎಂದು ಮತ್ತು ಅದರಲ್ಲಿ ಇರುವ ಸಹಿ ನನ್ನದಾಗಿರುತ್ತದೆ.

ನನ್ನ ಮುಖ್ಯ ವಿಚಾರಣೆಯ ಪೂರವಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಮಾಡಿದ್ದು ಅದನ್ನು ನೋಡಿ ಗುರುತಿಸಿರುತ್ತೇನೆ.

1. ಪ್ರಥಮ ವರ್ತಮಾನ ವರದಿಯ ಯಥಾ ನಕಲನ್ನು ನಿಪಿ 1
2. ದೂರಿನ ಯಥಾ ನಕಲನ್ನು ನಿಪಿ 2,
3. ಆಸ್ಪತ್ರೆ ಮೆಮೊ ಯಥಾ ನಕಲನ್ನು ನಿಪಿ 3,
4. ಅಪರಾಧ ನಮೂನೆ ಯಥಾ ನಕಲನ್ನು ನಿಪಿ 4
5. ಗಾಯದ ಪ್ರಮಾಣ ಪತ್ರದ ಯಥಾ ನಕಲನ್ನು ನಿಪಿ 5
6. ಸಾಕ್ಷಿಗಳ ಹೇಳಿಕೆಯ ಯಥಾ ನಕಲನ್ನು ನಿಪಿ 6,
7. ಆರ್ ಟಿ ಸಿ ಯಥಾ ನಕಲನ್ನು ನಿಪಿ 7,
8. ಅಂತಿಮ ದೋಷಾರೋಪಣ ಪತ್ರದ ಯಥಾ ನಕಲನ್ನು ನಿಪಿ 8,

9. ತಿಳುವಳಿಕೆ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ 9

10. 3 ಅಂಚೆ ರಶೀದಿಗಳನ್ನು ನಿಪಿ 10 ರಿಂದ 12

11. 3 ಅಂಚೆ ಸ್ವೀಕೃತಿ ಪತ್ರಗಳನ್ನು ನಿಪಿ 13 ರಿಂದ 15,

12. ಎಂ ಎಲ್ ಸಿ ಕೇಸ್ ಶೀಟ್ ನ್ನು ನಿಪಿ 16

13. 2 ಔಷಧಿ ಬಿಲ್ಲುಗಳನ್ನು ನಿಪಿ 17 ಮತ್ತು 18 ಎಂದು ಗುರುತಿಸಿದ್ದೇನೆ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.